ಬೆವಿಕಂ

BESCOM

# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

## (ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಐ.ಎಸ್.ಓ. 9001 : 2008 ದೃಢೀಕರಣ ಪಡೆದ ಕಂಪನಿ

ಸಂಖ್ಯೆ: ಬೆವಿಕಂ/ಮು.ಪ್ರ.ವ್ಯ(ಕಂ.ವ್ಯ)/ಬಿಸಿ–9/ಆರ್.ಟಿ.ಐ/ಕ–1 /2012–13//CYS-4506

ನಿಗಮ ಕಾರ್ಯಾಲಯ<br>
ಕೆ. ಆರ್. ವೃತ್ತ, ಬೆವಿಕಂ,<br>
ಬೆಂಗಳೂರು – 560 001,<br>
ದಿನಾಂಕ: 10-01-2013

## ಅಧಿಕೃತ ಜ್ಞಾಪನ

**ವಿಷಯ :** ಮಾಹಿತಿ ಹಕ್ಕು ಕಾಯ್ದೆ 2005ರ ಸೆಕ್ಷನ್ 4(1)(ಎ) ಮತ್ತು 4(1)(ಬಿ) ಅಡಿಯಲ್ಲಿ ಮಾಹಿತಿ ಒದಗಿಸುವ ಕುರಿತು.<br>
**ಉಲ್ಲೇಖ :** ದಿನಾಂಕ ೧೯/೧೨/೨೦೧೨ರ ಓ.ಆರ್.ಎಮ್ ಸಭೆಯ ನಡಾವಳಿ.

**ಪೀಠಿಕೆ :**

ಮಾಹಿತಿ ಹಕ್ಕು ಅಧಿನಿಯಮ 2005ರ ಅಡಿಯಲ್ಲಿ ಸೆಕ್ಷನ್ 4(1)(ಎ) ಮತ್ತು 4(1)(ಬಿ) ನಲ್ಲಿ ಸೂಚಿಸಿರುವ ವಿವಿಧ ಮಾಹಿತಿಗಳನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ಅಂತರ್ಜಾಲದ ಮೂಲಕ ಕಲ್ಪಿಸುವುದು ಪ್ರತಿ ಕಛೇರಿಗೂ ಕಡ್ಡಾಯವಾಗಿದ್ದು, ಇದುವರೆಗೂ ಜಾರಿಗೊಳಿಸದಿರುವುದು ನಿಗಮ ಕಛೇರಿಯ ಗಮನಕ್ಕೆ ಬಂದಿದೆ.

ಈ ರೀತಿಯ ಅಧಿನಿಯಮದ ನಿಬಂಧನೆಗಳ ಪಾಲನೆಯಲ್ಲಿನ ವಿಳಂಬತೆಯನ್ನು ತಡೆಯಲು ಹಾಗೂ ತ್ವರಿತ ಕ್ರಮ ಜರುಗಿಸಲು ಈ ಅಧಿಕೃತ ಜ್ಞಾಪನವನ್ನು ಹೊರಡಿಸಲಾಗಿದೆ.

**ಸಂಖ್ಯೆ: ಬೆವಿಕಂ/ಮು.ಪ್ರ.ವ್ಯ(ಕಂ.ವ್ಯ)/ಬಿಸಿ–9/ಆರ್.ಟಿ.ಐ/ಕ–1 /2012–13/**CYS-4506 **ದಿನಾಂಕ :** 10-01-2013

ಬೆವಿಕಂನ ಎಲ್ಲಾ ಕಛೇರಿಯ ಮುಖ್ಯಸ್ಥರು ಮಾಹಿತಿ ಹಕ್ಕು ಅಧಿನಿಯಮ 2005ರ ಸೆಕ್ಷನ್ 4(1)(ಎ) ಮತ್ತು 4(1)(ಬಿ) ಪ್ರಕಾರದ ವಿವಿಧ ಮಾಹಿತಿಗಳನ್ನು ಸಂಕಲಿಸಿ ಅಂತರ್ಜಾಲದಲ್ಲಿ ಪ್ರಕಟಿಸಲು ಕೂಡಲೆ ಸೂಕ್ತ ಕ್ರಮ ಕೈಗೊಳ್ಳುವಂತೆ ಕಟ್ಟುನಿಟ್ಟಾಗಿ ಸೂಚಿಸಿದೆ.

ಅಂತರ್ಜಾಲದ ಪ್ರಕಟಣೆಗೆ ತಾಂತ್ರಿಕ ಅವಶ್ಯಕತೆ ಪೂರೈಸುವಲ್ಲಿ ವಿಳಂಬವಾಗುವುದಿದ್ದಲ್ಲಿ ಅಲ್ಲಿಯವರೆಗೂ ಈ ಮಾಹಿತಿಯನ್ನು ಸಿದ್ಧಪಡಿಸಿ ಕಛೇರಿಯ ಸೂಚನ ಫಲಕದಲ್ಲಿ ಪ್ರದರ್ಶಿಸಲು ಕೂಡಲೆ ಕ್ರಮ ಕೈಗೊಳ್ಳಲು ಸೂಚಿಸಿದೆ.

10/1/13

ಮುಖ್ಯ ಪ್ರಧಾನ ವ್ಯವಸ್ಥಾಪಕರು<br>
ನಿಗಮ ವ್ಯವಹಾರಣೆ

ಪ್ರತಿ:

1. ಎಲ್ಲಾ ಮುಖ್ಯ ಪ್ರಧಾನ ವ್ಯವಸ್ಥಾಪಕರು, ನಿಗಮ ಕಾರ್ಯಾಲಯ, ಬೆವಿಕಂ, ಬೆಂಗಳೂರು.
2. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕಾ ಮತ್ತು ಪಾ ವಲಯ, ಬೆವಿಕಂ.
3. ಎಲ್ಲಾ ಪ್ರಧಾನ ವ್ಯವಸ್ಥಾಪಕರು, ನಿಗಮ ಕಾರ್ಯಾಲಯ, ಬೆವಿಕಂ, ಬೆಂಗಳೂರು.
4. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಬೆವಿಕಂ.
5. ಎಲ್ಲಾ ಲೆಕ್ಕ ನಿಯಂತ್ರಣಾಧಿಕಾರಿಗಳು, ಬೆವಿಕಂ.
6. ಪೊಲೀಸ್ ಅಧೀಕ್ಷಕರು, ಜಾಗೃತ ದಳ, ಬೆವಿಕಂ.
7. ಎಲ್ಲಾ ಉಪ ಪ್ರಧಾನ ವ್ಯವಸ್ಥಾಪಕರು, ನಿಗಮ ಕಾರ್ಯಾಲಯ, ಬೆವಿಕಂ, ಬೆಂಗಳೂರು.
8. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, ಬೆವಿಕಂ.
9. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, ಬೆವಿಕಂ.
10. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ತಾಂ)ರವರ ಆಪ್ತ ಕಾರ್ಯದರ್ಶಿಗಳು, ನಿಗಮ ಕಾರ್ಯಾಲಯ, ಬೆವಿಕಂ, ಬೆಂಗಳೂರು.